**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ. ನ್ಯಾಯಾಲಯ**

**ಹಿರೇಕೆರೂರು**

ಸಿ.ಸಿ. ನಂಃ 97/2023

ಸಿ.ಡಬ್ಲ್ಯೂಃ 1

**ಪಿ.ಡಬ್ಲ್ಯೂಃ 1**

ಸಾಕ್ಷಿದಾರರ ಹೆಸರುಃ - ಗದಿಗೆಪ್ಪ

ತಂದೆಯ ಹೆಸರುಃ - ಬಸಲಿಂಗಪ್ಪ ಮರ್ಕಳ್ಳಿ

ವಯಸ್ಸುಃ - 80 ವರ್ಷ

ಉದ್ಯೋಗ - ವ್ಯವಸಾಯ

ವಾಸಸ್ಥಳ - ದೂದಿಹಳ್ಳಿ

ದಿನಾಂಕಃ 19-01-2026 ರಂದು ಸಾಕ್ಷಿಯನ್ನು ಕರೆಯಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ - ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಆರೋಪಿಗಳು ನಮ್ಮ ಸಂಬಂಧಿಕರು. ಚಾಸಾ-4 ಮತ್ತು 5 ನನ್ನ ಮಕ್ಕಳು. ಚಾಸಾ-9 ನನ್ನ ಹೆಂಡತಿ. ಚಾಸಾ-6 ರಿಂದ 8 ರವರು ನಮ್ಮ ಸಂಬಂಧಿಕರು. ವಿವಾಧಿತ ಪಂಚಾಯಿತಿ ಆಸ್ತಿಯನ್ನು ನನ್ನ ಅಜ್ಜ ಖರೀದಿಸಿದ್ದು, ಅಂದಿನಿಂದ ಇಂದಿನವರೆಗೂ ನಾನು ಹಾಗೂ ನನ್ನ ಕುಟುಂಬದವರು ದನದ ಕೊಟ್ಟಿಗೆ, ತಿಪ್ಪೆಗುಂಡಿ, ಕಟ್ಟಿಗೆ, ಹುಲ್ಲು ಬಣಿವೆ ಹಾಕಿಕೊಂಡು ಸ್ವಾಧೀನದಲ್ಲಿರುತ್ತೇವೆ. ಆರೋಪಿಗಳು ಸದರಿ ಜಾಗದ ನಮ್ಮ ಮಾಲೀಕತ್ವವನ್ನು ಅಲ್ಲಗಳೇದು ಅವರಿಗೆ ಸೇರಬೇಕು ಎಂದು ಆಗಾಗ್ಗೆ ಜಗಳ ಮಾಡುತ್ತಿದ್ದರು. ಈಗ್ಗೆ ಸುಮಾರು ವರ್ಷದ ಹಿಂದೆ ನಾನು, ಚಾಸಾ-4 ಮತ್ತು 5 ರವರು ಸದರಿ ಜಾಗದಲ್ಲಿ ಕೆಲಸ ಮಾಡುತ್ತಿದ್ದಾಗ ಆರೋಪಿಗಳು ಏಕಾ ಏಕಿ ಬಂದು ಜಾಗ ಅವರಿಗೆ ಸೇರಬೇಕು ಎಂದು ಗಲಾಟೆ ಮಾಡಿದರು. ಒಂದು ಬಡಿಗೆಯಿಂದ 1 ನೇ ಆರೋಪಿ ನನ್ನ ಎಡಭುಜಕ್ಕೆ ಹೊಡೆದನು. 2 ರಿಂದ 4 ನೇ ಆರೋಪಿಗಳು ಚಾಸಾ-4 ಮತ್ತು 5 ರವರಿಗೆ ಹಲ್ಲೆ ಮಾಡಿ ಬಡಿಗೆಯಿಂದ ಹೊಡೆದಿರುತ್ತಾರೆ. ಅವಾಚ್ಯ ಶಬ್ದಗಳಿಂದ ಬೈದು, ಜೀವ ಬೆದರಿಕೆ ಹಾಕಿರುತ್ತಾರೆ. ಅಷ್ಟರಲ್ಲಿ ಚಾಸಾ-6 ರಿಂದ 9 ರವರು ಬಂದು ಜಗಳ ಬಿಡಿಸಿದರು. ಈ ಸಂಬಂಧ ನಾನು ಆರೋಪಿಗಳ ವಿರುದ್ಧ ದೂರು ನೀಡಿರುತ್ತೇನೆ.

2. ನಾನು ನೀಡಿದ ದೂರಿನ ಮೇರೆಗೆ ಮರುದಿನ ಪೋಲಿಸರು ಘಟನಾ ಸ್ಥಳಕ್ಕೆ ಬೇಟಿ ನೀಡಿ ನಾನು ಸ್ಥಳ ತೋರಿಸಿದ ಮೇರೆಗೆ ಚಾಸಾ-2 ಮತ್ತು 3 ರವರ ಸಮಕ್ಷಮ ಬೆಳಿಗ್ಗೆ 10-30 ರಿಂದ 11-30 ರವರೆಗೆ ಮಹಜರ ಕ್ರಮ ಜರುಗಿಸಿ ನಾನು ಹಾಜರು ಪಡಿಸಿದ ಒಂದು ಮರದ ದೊಣ್ಣೆಯನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ.

3. ಸಾಕ್ಷಿದಾರರು ದಿಃ 15-02-2022 ರ ದೂರನ್ನು ಹಾಗೂ ದಿಃ 16-02-2022 ಮಹಜರ ವರದಿಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು **ನಿಪಿ-1 ಮತ್ತು 2** ಎಂದು, ಅವುಗಳಲ್ಲಿನ ಸಾಕ್ಷಿದಾರರ ಸಹಿಗಳನ್ನು **ನಿಪಿ-1 ಎ ಮತ್ತು 2 ಎ** ಎಂದು, 2 ಪೋಟೋಗಳು **ನಿಪಿ-3 ಮತ್ತು 4** ಎಂದು ಗುರುತಿಸಲಾಯಿತು. ಜಪ್ತಾದ ಮರದ ದೊಣ್ಣೆಯನ್ನು **ಎಂ. ಓ.-1** ಎಂದು ಗುರುತಿಸಲಾಯಿತು.

4. ಸಾಕ್ಷಿದಾರರು ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.**

**(**ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು **)**

ಓ ಹೆ ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ.

ದಿನಾಂಕಃ 19-01-2026

Sd/-
ಹಿರಿಯ ಸಿ ಜೆ ಮತ್ತು ಜೆ. ಎಂ.ಎಫ್. ಸಿ,
ಹಿರೇಕೆರೂರು